# The President Launching Goods and Services Tax (GST) on 1st July 2017

**downloaded from: www.kpscvaani.com**
Scanned by CamScanner

**ಸರಕು ಮತ್ತು ಸೇವಾ ತೆರಿಗೆ(ಜಿಎಸ್ ಟಿ:GST) 2016: (Goods and Services Tax Bill or GST Bill 2016)** ಭಾರತದ ತೆರಿಗೆ ವ್ಯವಸ್ಥೆಯಲ್ಲಿ ತೆರಿಗೆ ಸುಧಾರಣಾ ಕ್ರಮವಾಗಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ದಿ.1 ಜುಲೈ, 2017 ಮಧ್ಯರಾತ್ರಿಯಿಂದಲೇ ದೇಶದಾದ್ಯಂತ ಜಾರಿಗೆ ಬಂದಿದೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಮಧ್ಯರಾತ್ರಿ 12 ಗಂಟೆಗೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಗುಂಡಿ ಒತ್ತುವ ಮೂಲಕ ಹೊಸ ತೆರಿಗೆ ವ್ಯವಸ್ಥೆಗೆ ಚಾಲನೆ ನೀಡಿದರು. [೧] |}

- ಸರಕು ಮತ್ತು ಸೇವಾ ತೆರಿಗೆ ಬಿಲ್ ಅಥವಾ ಜಿ.ಎಸ್.ಟಿ ಮಸೂದೆ (ಬಿಲ್) (ಹಿಂದಿ: वस्तु एवं सेवा कर विधेयक), ಅಧಿಕೃತವಾಗಿ ಇದು ಸಂವಿಧಾನದ (ನೂರಾ ಇಪ್ಪತ್ತೆರಡನೇ ತಿದ್ದುಪಡಿ) ಮಸೂದೆ, 2014 ಎಂದು ಪ್ರಸ್ತಾಪಿಸಿದೆ. ಇದು ರಾಷ್ಟ್ರೀಯ ಮೌಲ್ಯವರ್ಧಿತ ತೆರಿಗೆಯನ್ನು ಭಾರತದಲ್ಲಿ ಅನುಷ್ಠಾನಗೊಳಿಸಲು ತಂದ ಮಸೂದೆ.(ಜೂನ್ 2016)

**downloaded from: www.kpscvaani.com**
Scanned by CamScanner

- ದಿ.3-8-2016 ರಂದು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಮಸೂದೆ ಮಂಡಿಸಿದ ನಂತರ ರಾತ್ರಿ 9ರ ತನಕ ಸುದೀರ್ಘ ಚರ್ಚೆ ನಡೆಯಿತು. ಆರಂಭದಿಂದಲೇ ಜಿಎಸ್‌ಟಿಯನ್ನು ವಿರೋಧಿಸುತ್ತಿರುವ ಎಐಎಡಿಎಂಕೆ ಸಭಾತ್ಯಾಗ ನಡೆಸುವ ಮೂಲಕ ಮತದಾನದಿಂದ ದೂರ ಉಳಿಯಿತು. ಇತರ ಎಲ್ಲ ಪಕ್ಷಗಳು ಮಸೂದೆಯನ್ನು ಬೆಂಬಲಿಸಿದವು. ಹಾಗಾಗಿ ಸಂವಿಧಾನ ತಿದ್ದುಪಡಿ ಮಸೂದೆಗೆ ರಾಜ್ಯಸಭೆ **ಅವಿರೋಧ ಅಂಗೀಕಾರ** ನೀಡಿತು. ಸದನದಲ್ಲಿ ಹಾಜರಿದ್ದ ಎಲ್ಲ 203 ಸದಸ್ಯರು ಮಸೂದೆಯ ಪರ ಮತ ಹಾಕಿದರು. (ತಿದ್ದುಪಡಿಗಳ ಕಾರಣ ಪುನಃ ಲೋಕಸಭೆ ಅಂಗೀಕಾರ ಆಗಬೇಕು)

downloaded from: www.kpscvaani.com
Scanned by CamScanner

- 2017ರ ಏಪ್ರಿಲ್‌ನಿಂದ ಜಿಎಸ್‌ಟಿ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ ಅದಕ್ಕೂ ಮೊದಲು 29 ರಾಜ್ಯಗಳ ಪೈಕಿ ಕನಿಷ್ಠ 15 ರಾಜ್ಯಗಳು (ಶೇ 50ರಷ್ಟು) ಮಸೂದೆಗೆ ಅನುಮೋದನೆ ನೀಡಬೇಕಿದೆ. ಜೊತೆಗೆ ಹೊಸ ವ್ಯವಸ್ಥೆಯನ್ನು ಜಾರಿಗೆ ತರಲು ರಾಜ್ಯಗಳು ಸಜ್ಜಾಗಬೇಕಿವೆ. ವರಮಾನ ಹಂಚಿಕೆ ಮುಂತಾದ ವಿಚಾರಗಳ ಪೂರಕ ಮಸೂದೆಗಳು ಸಂಸತ್ತಿನ ಅಂಗೀಕಾರ ಪಡೆಯಬೇಕಿವೆ. ಹಾಗಾಗಿ ಏಪ್ರಿಲ್ ಒಂದರಿಂದಲೇ ಜಾರಿಗೆ ತರುವುದು ಕಷ್ಟ ಎಂಬ ಮಾತು ಕೇಳಿ ಬರುತ್ತಿದೆ. (2017ರ ಜುಲೈ ನಂತರವೇ ಹೊಸ ತೆರಿಗೆ ವ್ಯವಸ್ಥೆ ಜಾರಿಗೆ ಬರುತ್ತದೆ [೩].)

**downloaded from: www.kpscvaani.com**
Scanned by CamScanner

## ^ ತಕ್ಷಣದ ಪರಿಣಾಮ

- ಪ್ರಸ್ತುತ ಸೇವಾ ತೆರಿಗೆ ದರ ಶೇ 14.5 ರಷ್ಟಿದೆ. ಜಿಎಸ್‌ಟಿ ದರ ಶೇ 18 ರಷ್ಟು ನಿಗದಿಪಡಿಸಿದರೆ ಸೇವಾ ವಲಯಕ್ಕೆ ಹೊರೆ ಬೀಳಲಿದೆ. ಪ್ರವಾಸ, ವಿಮಾನ ಪ್ರಯಾಣ, ಆಂಬುಲೆನ್ಸ್ ಸೇವೆ, ಸಾಂಸ್ಕೃತಿಕ ಚಟುವಟಿಕೆ, ಕೆಲವೊಂದು ತೀರ್ಥಯಾತ್ರೆಗಳು, ಕ್ರೀಡಾ ಸ್ಪರ್ಧೆಗಳು ದುಬಾರಿಯಾಗಲಿವೆ. ಭಾರತದ ಆರ್ಥಿಕತೆಯಲ್ಲಿ ಸೇವಾ ವಲಯದ ಪಾಲು ಶೇ 57 ರಷ್ಟಿದೆ. ಆದ್ದರಿಂದ ತೆರಿಗೆ ದರ ಹೆಚ್ಚಿದರೆ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ. (೧೩೦ ಕೋಟಿ ಜನಸಂಖ್ಯೆಯಿರುವ ದೇಶದಲ್ಲಿ ಈ ತೆರಿಗೆಯಿಂದ ಸರ್ಕಾರಕ್ಕೆ ಸುಮಾರು ೧೫೦ ಲಕ್ಷ ಕೋಟಿ ಹೆಚ್ಚುವರಿ ಆದಾಯ ದರುವುದೆಂದರೆ, ಸರಾಸರಿ ೧.೧೫ ಲಕ್ಷ ರೂಪಾಯಿಯಷ್ಟು ವಾರ್ಷಿಕ ತಲಾ ಹೆಚ್ಚುವರಿ ತೆರಿಗೆ ಬೀಳಬಹುದು. ಬಡವರಿಗೆ ವಾರ್ಷಿಕ ತಲಾ ೩೬ಸಾವಿರ ತೆರಿಗೆ ಬಿದ್ದರೆ ಬಡತನದ ಮೇಲಿನವರಿಗೆ ವಾರ್ಷಿಕ ೪೦,೦೦೦ರೂ.ನಿಂದ ೨ ಲಕ್ಷ ರೂಪಾಯಿಗೂ ಹೆಚ್ಚು ತೆರಿಗೆ ಬೀಳಬಹುದು. ನಾಲ್ಕು ಜನರ ಕುಟುಂಬವನ್ನು ಗಣನೆಗೆ ತೆಗೆದುಕೊಂಡರೆ ಅದರ ನಾಲ್ಕರಷ್ಟು ತೆರಿಗೆಯ ಹೊರೆ ಬೀಳಬಹುದು. ಅದು ಜಾರಿಗೆ ಬಂದಾಗಲೇ ಅದರ ನಿಜ ಪರಿಣಾಮ ತಿಳಿಯುವುದು.)

downloaded from: www.kpscvaani.com
Scanned by CamScanner

- ಸ್ಥಳೀಯಾಡಳಿತ ಸಂಸ್ಥೆಗಳು ವಿಧಿಸುವ ತೆರಿಗೆಗಳು ಜಿಎಸ್‌ಟಿಯಲ್ಲಿ ಅಂತರ್ಗತವಾಗುವುದಿಲ್ಲ. ಈ ತೆರಿಗೆಗಳು ಪ್ರತ್ಯೇಕವಾಗಿಯೇ ಉಳಿಯಲಿವೆ.
- ಜಿಎಸ್‌ಟಿ ಜಾರಿಗೆ ಬರುವುದರೊಂದಿಗೆ ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸೇವಾ ತೆರಿಗೆ, ಐಷಾರಾಮ ತೆರಿಗೆ ಮತ್ತು ಆಕ್ಟ್ರಾಯ್ ಸೇರಿದಂತೆ ಎಲ್ಲ ಪರೋಕ್ಷ ತೆರಿಗೆಗಳು ರದ್ದಾಗಲಿವೆ.

- ಸರ್ಕಾರವು ಜಿಎಸ್‌ಟಿ ದರವನ್ನು ಶೇ 18ಕ್ಕೆ ನಿಗದಿಪಡಿಸಿದರೆ, ತಯಾರಕರು ಮತ್ತು ಗ್ರಾಹಕರು ಈ ಹೊಸ ತೆರಿಗೆ ವ್ಯವಸ್ಥೆಯಡಿ ಲಾಭ ಪಡೆಯಲಿದ್ದಾರೆ. ಅಬಕಾರಿ ಸುಂಕ, ವ್ಯಾಟ್ ಮತ್ತು ಕೇಂದ್ರ ಮಾರಾಟ ತೆರಿಗೆ ನೀಡಬೇಕಿರುವುದರಿಂದ ಗ್ರಾಹಕರು ಈಗ ವಸ್ತುವೊಂದರ ಉತ್ಪಾದನಾ ವೆಚ್ಚಕ್ಕಿಂತ ಅಂದಾಜು ಶೇ 25 ರಷ್ಟು ಅಧಿಕ ಬೆಲೆ ನೀಡುತ್ತಿದ್ದಾರೆ. ಜಿಎಸ್‌ಟಿ ಅನುಷ್ಠಾನಗೊಂಡರೆ ಗ್ರಾಹಕನ ಹೊರೆ ಕಡಿಮೆಯಾಗಲಿದೆ.

- ಅಬಕಾರಿ, ವ್ಯಾಟ್ ಮತ್ತು ಸೇವಾ ತೆರಿಗೆ ಪಾವತಿಸುತ್ತಿರುವ ತಯಾರಕರು ಇನ್ನು ಮುಂದೆ ಏಕರೂಪದ ತೆರಿಗೆ ವ್ಯವಸ್ಥೆಯಡಿ ಬರಲಿದ್ದಾರೆ.
- ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಗ್ರಾಹಕರು ತೆರಿಗೆಯ ಜತೆಗೆ ಇತರ ಕೆಲವು ಸೆಸ್‌ಗಳನ್ನೂ ಪಾವತಿಸುತ್ತಾರೆ. ಆದರೆ ಇನ್ನು ಮುಂದೆ ತೆರಿಗೆಯ ಮೇಲೆ ಉಪಕರ ಇರುವುದಿಲ್ಲ.

downloaded from: www.kpscvaani.com
Scanned by CamScanner

- ಅಬಕಾರಿ, ವ್ಯಾಟ್ ಮತ್ತು ಸೇವಾ ತೆರಿಗೆ ಪಾವತಿಸುತ್ತಿರುವ ತಯಾರಕರು ಇನ್ನು ಮುಂದೆ ಏಕರೂಪದ ತೆರಿಗೆ ವ್ಯವಸ್ಥೆಯಡಿ ಬರಲಿದ್ದಾರೆ.
- ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಗ್ರಾಹಕರು ತೆರಿಗೆಯ ಜತೆಗೆ ಇತರ ಕೆಲವು ಸೆಸ್‌ಗಳನ್ನೂ ಪಾವತಿಸುತ್ತಾರೆ. ಆದರೆ ಇನ್ನು ಮುಂದೆ ತೆರಿಗೆಯ ಮೇಲೆ ಉಪಕರ ಇರುವುದಿಲ್ಲ.
- ಕಚ್ಚಾ ಅಹಾರ ಪದಾರ್ಥ ಸೇರಿದಂತೆ ಕೆಲವು ಅಗತ್ಯ ವಸ್ತುಗಳ ತೆರಿಗೆ ದರ ಪ್ರಸ್ತುತ ಶೇ 6 ರಿಂದ ಶೇ 8ರಷ್ಟಿದೆ. ಜಿಎಸ್‌ಟಿ ದರವನ್ನು ಶೇ 18ಕ್ಕೆ ನಿಗದಿಪಡಿಸಿದರೆ ಎಲ್ಲ ಅಗತ್ಯ ಸಾಮಗ್ರಿಗಳ ಬೆಲೆ ಏರಿಕೆಯಾಗಲಿದೆ.

downloaded from: www.kpscvaani.com
Scanned by CamScanner

**ಜಿಎಸ್‌ಟಿ ನಡೆದು ಬಂದ ದಾರಿ**

- 1986: ಫೆಬ್ರುವರಿ: ಅಬಕಾರಿ ಸುಂಕ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆ ಆಗಬೇಕು ಎಂದು ಹಣಕಾಸು ಸಚಿವ ವಿಶ್ವನಾಥ್ ಪ್ರತಾಪ್ ಸಿಂಗ್; 1986–87ರ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದರು

- 2000: ಜಿಎಸ್‌ಟಿಯ ಸ್ವರೂಪವನ್ನು ವಿನ್ಯಾಸ ಮಾಡಲು ಪಶ್ಚಿಮ ಬಂಗಾಳದ ಹಣಕಾಸು ಸಚಿವ ಅಸೀಂ ದಾಸ್‌ಗುಪ್ತಾ ನೇತೃತ್ವದಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಸಮಿತಿ ರಚನೆ

- 2003: ತೆರಿಗೆ ಸುಧಾರಣೆ ಶಿಫಾರಸಿಗಾಗಿ ವಿಜಯ್ ಕೇಳ್ಕರ್ ನೇತೃತ್ವದಲ್ಲಿ ಕಾರ್ಯಪಡೆ ರಚನೆ

- 2004: ಜಾರಿಯಲ್ಲಿದ್ದ ತೆರಿಗೆ ಪದ್ಧತಿಗೆ ಪರ್ಯಾಯವಾಗಿ ಜಿಎಸ್‌ಟಿ ಜಾರಿ ಮಾಡಬಹುದು ಎಂದು ಕೇಳ್ಕರ್ ಅವರಿಂದ ಶಿಫಾರಸು

- 2006: ಫೆಬ್ರುವರಿ, 28: ಜಿಎಸ್‌ಟಿ ಬಗ್ಗೆ ಬಜೆಟ್ ಭಾಷಣದಲ್ಲಿ ಪ್ರಸ್ತಾವ ಮಾಡಿದ ಹಣಕಾಸು ಸಚಿವ ಪಿ.ಚಿದಂಬರಂ. ಜಿಎಸ್‌ಟಿ ಅನುಷ್ಠಾನಕ್ಕೆ 2010ರ ಏಪ್ರಿಲ್1ರ ಗಡವು

- 2008: ಜಿಎಸ್‌ಟಿ ಅನುಷ್ಠಾನ ನೀಲನಕ್ಷೆ ಸಿದ್ಧಪಡಿಸಲು ಎಲ್ಲಾ ರಾಜ್ಯಗಳ ಹಣಕಾಸು ಸಚಿವರಿರುವ ಉನ್ನತಾಧಿಕಾರ ಸಮಿತಿ ರಚನೆ

downloaded from: www.kpscvaani.com
Scanned by CamScanner

- 2008:ಏಪ್ರಿಲ್ 30: ಜಿಎಸ್‌ಟಿ ಅನುಷ್ಠಾನ ನೀಲನಕ್ಷೆ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಉನ್ನತಾಧಿಕಾರ ಸಮಿತಿ

- 2009: ದಾಸ್‌ಗುಪ್ತಾ ಸಮಿತಿ ವಿನ್ಯಾಸ ಮಾಡಿದ ಜಿಎಸ್‌ಟಿಯ ಮೂಲ ಸ್ವರೂಪವನ್ನು ಬಹಿರಂಗಪಡಿಸಿದ ಹಣಕಾಸು ಸಚಿವ ಪ್ರಣವ್ ಮುಖರ್ಜಿ. ಮೂಲ ಸ್ವರೂಪದ ಬಗ್ಗೆ ವಿರೋಧ ಪಕ್ಷ ಬಿಜೆಪಿಯ ಆಕ್ಷೇಪ

- 2010 ಫೆಬ್ರುವರಿ: ಜಿಎಸ್‌ಟಿ ಜಾರಿಗೆ ಪೂರ್ವಭಾವಿಯಾಗಿ ರಾಜ್ಯ ವಾಣಿಜ್ಯ ತೆರಿಗೆಗಳ ಕಂಪ್ಯೂಟರೀಕರಣಕ್ಕೆ ಚಾಲನೆ. ಜಿಎಸ್‌ಟಿ ಜಾರಿ, 2011ರ ಏಪ್ರಿಲ್ 1ಕ್ಕೆ ಮುಂದೂಡಿಕೆ

- 2011:ಮಾರ್ಚ್ 22: ಜಿಎಸ್‌ಜಿ ಜಾರಿಗೆ ಅನುವು ಮಾಡಿಕೊಡುವ ಉದ್ದೇಶದಿಂದ ಲೋಕಸಭೆಯಲ್ಲಿ 115ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆ ಮಂಡಿಸಿದ ಯುಪಿಎ–2 ಸರ್ಕಾರ

  -ಮಾರ್ಚ್ 29: ಜಿಎಸ್‌ಟಿ ಮಸೂದೆ, ಯಶವಂತ್ ಸಿನ್ಹಾ ನೇತೃತ್ವದ ಹಣಕಾಸು ಸಂಸದೀಯ ಸ್ಥಾಯಿ ಸಮಿತಿಯ ಪರಿಶೀಲನೆಗೆ. ಅಸೀಂ ದಾಸ್‌ಗುಪ್ತಾ ಸ್ಥಾನಕ್ಕೆ ಕೆ.ಎಂ.ಮಾಣಿ ನೇಮಕ

**downloaded from: www.kpscvaani.com**
Scanned by CamScanner

- 2013 ಫೆಬ್ರುವರಿ: ಜಿಎಸ್‌ಟಿಯಿಂದಾಗಿ ತೆರಿಗೆ ನಷ್ಟ ಅನುಭವಿಸುವದರಿಂದ ರಾಜ್ಯಗಳಿಗೆ ರೂ.9,000 ಕೋಟಿ ಪರಿಹಾರ ನೀಡುವುದಾಗಿ ಬಜೆಟ್ ಭಾಷಣದಲ್ಲಿ ಘೋಷಿಸಿದ ಪಿ.ಚಿದಂಬರಂ

  ಆಗಸ್ಟ್: ಜಿಎಸ್‌ಟಿಯಲ್ಲಿನ ಸುಧಾರಣೆಗಳ ಸಂಬಂಧ ವರದಿ ಸಲ್ಲಿಸಿದ ಸಂಸದೀಯ ಸ್ಥಾಯಿ ಸಮಿತಿ. ಸಂಸತ್ತಿನಲ್ಲಿ ಮಂಡನೆಗೆ ಮಸೂದೆ ಸಿದ್ಧ

  ಅಕ್ಟೋಬರ್: 'ಜಿಎಸ್‌ಟಿಯಿಂದ ರಾಜ್ಯಕ್ಕೆ ಪ್ರತಿ ವರ್ಷ ರೂ.14,000 ಕೋಟಿ ತೆರಿಗೆ ನಷ್ಟವಾಗುತ್ತದೆ' ಎಂದು ಜಿಎಸ್‌ಟಿ ವಿರುದ್ಧ ಧ್ವನಿ ಎತ್ತಿದ ಗುಜರಾತ್ ಮುಖ್ಯಮಂತ್ರಿನರೇಂದ್ರ ಮೋದಿ

- 2014: ಲೋಕಸಭೆ ವಿಸರ್ಜನೆ ಆದ ಕಾರಣ, ಸಂಸದೀಯ ಸಮಿತಿ ಪಾಸು ಮಾಡಿದ್ದ ಜಿಎಸ್‌ಟಿ ಮಸೂದೆ ರದ್ದಾಯಿತು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ

  ಡಿಸೆಂಬರ್ 18: ಜಿಎಸ್‌ಟಿಯ 122ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಸಂಪುಟ ಒಪ್ಪಿಗೆ

  ಡಿಸೆಂಬರ್ 19: ಲೋಕಸಭೆಯಲ್ಲಿ ಮಸೂದೆ ಮಂಡನೆ. ಕಾಂಗ್ರೆಸ್‌ನಿಂದ ಆಕ್ಷೇಪ

- 2015 ಫೆಬ್ರುವರಿ: 2016ರ ಏಪ್ರಿಲ್1ಕ್ಕೆ ಜಿಎಸ್‌ಟಿ ಜಾರಿಗೆ ಗಡವು ನಿಗದಿ ಮಾಡಿದ ಹಣಕಾಸು ಸಚಿವ ಅರುಣ್ ಜೇಟ್ಲಿ

- ಮೇ 6: ಲೋಕಸಭೆಯಲ್ಲಿ ಮಸೂದೆಗೆ ಅನುಮೋದನೆ

- ಮೇ 12: ರಾಜ್ಯಸಭೆಯಲ್ಲಿ ಮಸೂದೆ ಮಂಡನೆ. ಜಿಎಸ್‌ಟಿ ದರವನ್ನು ಗರಿಷ್ಠ ಶೇ18ಕ್ಕೆ ನಿಗದಿ ಮಾಡುವಂತೆ ಕಾಂಗ್ರೆಸ್‌ನಿಂದ ಬೇಡಿಕೆ

downloaded from: www.kpscvaani.com
Scanned by CamScanner

- ಮೇ 14: ರಾಜ್ಯಸಭೆ ಮತ್ತು ಲೋಕಸಭೆಯ ಜಂಟಿ ಸಮಿತಿ ಮುಂದಕ್ಕೆ ಮಸೂದೆ

- ಆಗಸ್ಟ್: ರಾಜ್ಯಸಭೆಯಲ್ಲಿ ಮಸೂದೆಗೆ ವಿರೋಧ ಪಕ್ಷಗಳಿಂದ ಬೆಂಬಲ ಪಡೆಯಲು ವಿಫಲವಾದ ಸರ್ಕಾರ

- 2016 ಜುಲೈ: ಜಿಎಸ್‌ಟಿ ದರವನ್ನು ಗರಿಷ್ಠ ಶೇ18ಕ್ಕೆ ನಿಗದಿ ಮಾಡಲು ನಿರಾಕರಿಸಿದ ಸರ್ಕಾರ

- ಆಗಸ್ಟ್: ರಾಜ್ಯಸಭೆಯಲ್ಲಿ ಮಸೂದೆಗೆ ಬೆಂಬಲ ನೀಡಲು ಕಾಂಗ್ರೆಸ್ ಒಪ್ಪಿಗೆ. ಮಸೂದೆಗೆ ರಾಜ್ಯಸಭೆಯ ಅನುಮೋದನೆ

- ಸೆಪ್ಟೆಂಬರ್ 2: ಮಸೂದೆಗೆ ರಾಷ್ಟ್ರಪತಿಗಳ ಅಂಕಿತ

- ನವೆಂಬರ್ 3: ಶೇ 5, ಶೇ 12, ಶೇ 18 ಮತ್ತು ಶೇ 28ರಂತೆ ನಾಲ್ಕು ಹಂತದಲ್ಲಿ ತೆರಿಗೆ ವಿಧಿಸಲು ಜಿಎಸ್‌ಟಿ ಮಂಡಳಿ ಒಪ್ಪಿಗೆ. ಇದರ ಮೇಲೆ ಹೆಚ್ಚುವರಿ ಸೆಸ್ ವಿಧಿಸಲು ಅವಕಾಶ

**2017ಜನವರಿ 16**

2017ರ ಜುಲೈ 1ರಂದು ಜಿಎಸ್‌ಟಿ ಜಾರಿ ಘೋಷಣೆ.[೫]

**downloaded from: www.kpscvaani.com**
Scanned by CamScanner

- ಕೇಂದ್ರ ಹಣಕಾಸು ಸಚಿವ ಪಳನಿಯಪ್ಪನ್ ಚಿದಂಬರಂ, 2006-07 ಕೇಂದ್ರ ಬಜೆಟ್ ಸಂದರ್ಭದಲ್ಲಿ, ದಿನಾಂಕ 28 ಫೆಬ್ರವರಿ 2006 ಸಂದರ್ಭದಲ್ಲಿ, ಜಿಎಸ್ಟಿಯನ್ನು ಏಪ್ರಿಲ್ 1, 2010 ರಿಂದ ಜಾರಿಗೊಳಿಸಲು ಒಂದು ಒಂದು ಘೋಷಣೆಯನ್ನು ಮಾಡಿದರು. , ಅದಕ್ಕೆ ಕೇಂದ್ರ ಸರ್ಕಾರದ ಜೊತೆ ರಾಜ್ಯ ಹಣಕಾಸು ಸಚಿವರನ್ನು ಒಳಗೊಂಡ ಒಂದು ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಯಿತು. ಇದರಲ್ಲಿ ಎಂಬುದನ್ನು ಪರಿಚಯಿಸಲಾಯಿತು ಎಂದು, ಭಾರತದಲ್ಲಿ ಜಿಎಸ್.ಟಿಯನ್ನು ಈ ದಶಕದಲ್ಲಿ ಆರಂಭಗೊಂಳಿಸಲು ಮಾರ್ಗಸೂಚಿಯನ್ನು ತಯಾರುಮಾಡುವ ಕೆಲಸ ವಹಿಸಲಾಯಿತು.

**downloaded from: www.kpscvaani.com**
Scanned by CamScanner

- ಈ ಘೋಷಣೆಯ ನಂತರ, ರಾಜ್ಯ ಹಣಕಾಸು ಸಚಿವರು ಉನ್ನತಾಧಿಕಾರ ಸಮಿತಿ ಸಲಹೆಗಾರ ಕೇಂದ್ರ ಹಣಕಾಸು ಸಚಿವರು ಮತ್ತು ಸಹ ನಿರ್ವಾಹಕರು ಸದಸ್ಯ ಕಾರ್ಯದರ್ಶಿಗಳು, ಮತ್ತು ಸಂಬಂಧಪಟ್ಟ ಜಂಟಿ ಕಾರ್ಯದರ್ಶಿಗಳು, ಮೇ 10, 2007 ರಂದು ಜಂಟಿ ವರ್ಕಿಂಗ್ ಗ್ರೂಪ್ ಸ್ಥಾಪಿಸಲು ನಿರ್ಧರಿಸಿದರು. ಇಲಾಖೆ ಕೇಂದ್ರ ಹಣಕಾಸು ಸಚಿವಾಲಯದ ಕಂದಾಯ ಮತ್ತು ಅದರ ಸದಸ್ಯರನ್ನು ರಾಜ್ಯಗಳ ಹಣಕಾಸು ಕಾರ್ಯದರ್ಶಿಗಳ ಜಂಟಿ ಕಾರ್ಯನಿರ್ವಾಹಕ ತಂಡ (ವರ್ಕಿಂಗ್ ಗ್ರೂಪ್), ತಜ್ಞರು ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಚೇಂಬರ್ಸ್ ಪ್ರತಿನಿಧಿಗಳೊಂದಿಗೆ ತೀವ್ರ ಆಂತರಿಕ ಪರಸ್ಪರ ಚರ್ಚೆಗಳ ನಂತರ, ಈಸಮಿತಿಯು ತನ್ನ ವರದಿಯನ್ನು ಉನ್ನತಾಧಿಕಾರ ಸಮಿತಿಗೆ ನವೆಂಬರ್ 19, 2007 ರಂದು ಸಲ್ಲಿಸಿತು..

**downloaded from: www.kpscvaani.com**
Scanned by CamScanner

- ವರದಿಯನ್ನು ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ನವೆಂಬರ್ 28 ವಿವರವಾಗಿ ಚರ್ಚಿಸಿದ್ದು, 2007 ರಲ್ಲಿ ಈ ಚರ್ಚೆಯ ಮತ್ತು ರಾಜ್ಯಗಳ ಬರೆದ ಅವಲೋಕನಗಳ ಆಧಾರದ ಮೇಲೆ, ಕೆಲವು ಮಾರ್ಪಾಡುಗಳನ್ನು ಮಾಡಲಾಯಿತು, ಆ ಹಂತದಲ್ಲಿ ವೀಕ್ಷಣೆಗಳು ಉನ್ನತಾಧಿಕಾರ ಸಮಿತಿ ಮತ್ತು ಭಾರತ ಸರ್ಕಾರದಿಂದ ತಯಾರಿಸಲಾದ (ಏಪ್ರಿಲ್ 30, 2008) ಒಂದು ಅಂತಿಮ ಆವೃತ್ತಿಯನ್ನು ಕಳುಹಿಸಲಾಯಿತು. ಸಲಹೆಗಳನ್ನು ಭಾರತ ಸರ್ಕಾರ, ಡಿಸೆಂಬರ್ 12, 2008 ರಂದು ಸ್ವೀಕರಿಸಿತು, ಮತ್ತು ಉನ್ನತಾಧಿಕಾರ ಸಮಿತಿಯಿಂದ (ಡಿಸೆಂ.6, 2008ರಲ್ಲಿ) ಪರಿಗಣಿಸಲಾಗಿತ್ತು.

downloaded from: www.kpscvaani.com
Scanned by CamScanner

## ^ ಜಿ.ಎಸ್.ಟಿ.ಗೆ ಮೊದಲು ಇದ್ದ ತೆರಿಗೆಗಳು ಜಾರಿಯಾದ ವರ್ಷ

- ಜಿಎಸ್‌ಟಿ ಜಾರಿಗೆ ಬರುವುದರೊಂದಿಗೆ ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸೇವಾ ತೆರಿಗೆ, ಐಷಾರಾಮ ತೆರಿಗೆ ಮತ್ತು ಆಕ್ಟ್ರಾಯ್ ಸೇರಿದಂತೆ ಎಲ್ಲ ಪರೋಕ್ಷ ತೆರಿಗೆಗಳು ರದ್ದಾಗಲಿವೆ.

| ತೆರಿಗೆ | ಜಾರಿಯಾದ ಇಸವಿ |
|---|---|
| ಮಾರಾಟ ತೆರಿಗೆ | 1957 |
| ಸೇವಾ ತೆರಿಗೆ | 1994 |
| ಕೇಂದ್ರೀಯ ವ್ಯಾಟ್ | 2000 |
| ಅಬಕಾರಿ ಸುಂಕ | 1985 |
| ಪ್ರವೇಶ ತೆರಿಗೆ | 2000 |
| ಮೌಲ್ಯವರ್ಧಿತ ತೆರಿಗೆ | 2005 |

downloaded from: www.kpscvaani.com
Scanned by CamScanner

# ಸಂಕ್ಷಿಪ್ತ ಇತಿಹಾಸ

| ಇಸವಿ | ಘಟನೆ |
|---|---|
| 2000 | ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಿಂದ ಜಿಎಸ್‌ಟಿ ಕರಡು ರೂಪಿಸಲು, ಪಶ್ಚಿಮ ಬಂಗಾಳದ ಹಣ ಕಾಸು ಸಚಿವ ಆಸಿಂ ದಾಸ್‌ಗುಪ್ತಾ ನೇತೃತ್ವದ ಸಮಿತಿ ರಚನೆ. |
| 2003 | ವ್ಯಾಟ್ ತತ್ವದ ಆಧಾರದಲ್ಲಿಯೇ ಸಮಗ್ರ ಜಿಎಸ್‌ಟಿ ಜಾರಿಗೆ ತರುವಂತೆ ಪರೋಕ್ಷ ತೆರಿಗೆಗಳ ಮೇಲಿನ ಕೇಳ್ಕರ್ ಕಾರ್ಯಪಡೆಯಿಂದ ಶಿಫಾರಸು |
| 2006 | 2006–07ರ ಬಜೆಟ್ ಭಾಷಣದಲ್ಲಿ 2010ರ ಏಪ್ರಿಲ್ 1ರೊಳಗೆ ರಾಷ್ಟ್ರಮಟ್ಟದಲ್ಲಿ ಜಿಎಸ್‌ಟಿ ಬಗ್ಗೆ ಹಣಕಾಸು ಸಚಿವ ಪಿ.ಚಿದಂಬರಂ ಅವರಿಂದ ಲೋಕ ಸಭೆಯಲ್ಲಿ ಪ್ರಸ್ತಾಪ; ರಾಜ್ಯಗಳ ಹಣಕಾಸು ಸಚಿವರ ಉನ್ನತಾಧಿಕಾರ ಸಮಿತಿಗೆ ಜಿಎಸ್‌ಟಿ ಮಸೂದೆಯ ಕರಡು ಮತ್ತು ನೀಲಕನ್ಸೆಯನ್ನು ನೀಡಲಾಯಿತು. |

downloaded from: www.kpscvaani.com
Scanned by CamScanner

| | |
|---|---|
| 2009 | ನವೆಂಬರ್: ಉನ್ನತಾಧಿಕಾರ ಸಮಿ ತಿ ಜಿಎಸ್‌ಟಿ ಬಗೆಗಿನ ಮೊದಲ ಚರ್ಚಾ ಪ್ರಬಂಧವನ್ನು ಬಿಡುಗಡೆ ಮಾಡಿತು. 2010ರ ಏ.1ರಿಂದ ಜಾರಿಯ ಗುರಿ 2009: ಉನ್ನತಾಧಿಕಾರವುಳ್ಳ ಸಚಿವರ ಸಮಿತಿಯು ಜಿಎಸ್‌ಟಿ ಹೇಗಿರಬೇಕು ಎಂಬುದರ ಕುರಿತ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. |
| 2011 | ಎಲ್ಲಾ ಸರಕು ಮತ್ತು ಸೇವೆಗಳ ಮೇಲೆ ಜಿಎಸ್‌ಟಿ ಜಾರಿಗೊಳಿಸುವ ಸಂವಿಧಾನದ 115ನೇ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಮಂಡನೆ. ಮಸೂದೆ ಸ್ಥಾಯಿ ಸಮಿತಿಗೆ ರವಾನೆ; 2011: ಕೇಂದ್ರ ಹಣಕಾಸು ಬಜೆಟ್ ಮಂಡಿಸಿದ ಸಚಿವ ಪ್ರಣಬ್‌ಮುಖರ್ಜಿ ಅವರಿಂದ 2011ರ ಏ.1ರಿಂದ ಜಿಎಸ್‌ಟಿ ಜಾರಿಯಾಗುವ ವಿಶ್ವಾಸ. |
| 2013 | ಬಿಜೆಪಿ ಆಡಳಿತದ ಗುಜರಾತ್ ಸೇರಿದಂತೆ ಹಲವು ರಾಜ್ಯಗಳ ವಿರೋಧ. ಹೀಗಾಗಿ ಲೋಕಸಭೆಯಲ್ಲಿ ಮಸೂದೆ ರದ್ದಾಯಿತು. |
| 2014 | ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎದಿಂದ ಪರಿಷ್ಕೃತ ಮಸೂದೆ 2014 ಡಿ.9,ಮಂಡನೆ. |

downloaded from: www.kpscvaani.com
Scanned by CamScanner

| | |
|---|---|
| 2015 | 1. ಮೇ 6:ಸಂವಿಧಾನಕ್ಕೆ 122ನೇ ತಿದ್ದುಪಡಿ ತರುವ ಮಸೂದೆಗೆ ಲೋಕಸಭೆಯ ಅಂಗೀಕಾರ; ಮತ್ತೆ ರಾಜ್ಯಸಭೆಯ ಆಯ್ಕೆ ಸಮಿತಿಗೆ ಸಲ್ಲಿಕೆ,<br>2. 2015ರ ಜುಲೈ 22ರಂದು ವರದಿ ಸಲ್ಲಿಕೆ;ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಜತೆ ಸಮಾಲೋಚನೆ ನಡೆಸಿ ಮತ್ತೆ ಮಸೂದೆ ಪರಿಷ್ಕರಿಸಿದ ಸರ್ಕಾರ |
| 2016 | 1. ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ರಾಜ್ಯಸಭೆಯಲ್ಲಿ ಜಿಎಸ್‌ಟಿ ಮಸೂದೆ ಮಂಡನೆ.<br>2. **2016 ಆಗಸ್ಟ್ 3: ಕೊನೆಗೂ ರಾಜ್ಯಸಭೆಯಲ್ಲಿ ಮಸೂದೆಗೆ ಅಂಗೀಕಾರ.**[೭][೮] |
| 2017 | 2017 ಜೂನ್ 30ರ ಮಧ್ಯ ರಾತ್ರಿ ಸಂಸತ್ ಭವನದ ಐತಿಹಾಸಿಕ ಸೆಂಟ್ರಲ್ ಹಾಲ್ ನಲ್ಲಿ ಕರೆಯಲಾಗಿದ್ದ ವಿಶೇಷ ಜಂಟೀ ಅಧಿವೇಶನದಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಸಮ್ಮುಖದಲ್ಲಿ ಜಿ ಎಸ್ ಟಿ ಲೋಕಾರ್ಪಣೆ. ದೇಶದಾದ್ಯಂತ ಅಧೀಕೃತವಾಗಿ ಏಕ ರೂಪ ತೆರಿಗೆ ವ್ಯವಸ್ಥೆ ಜಾರಿ. |

**downloaded from: www.kpscvaani.com**
Scanned by CamScanner

## ^ ೨೦೧೬ ಆಗಸ್ಟ್ ಮಸೂದೆ ರಾಜ್ಯಸಭೆಯಲ್ಲಿ

- 2016 ಆಗಸ್ಟ್ 3 ರಂದು ಕೇಂದ್ರ ಹಣಕಾಸು ಮಂತ್ರಿ ಅರುಣ್ ಜೇಟ್ಲಿಯವರು ಸರಕು ಮತ್ತು ಸೇವಾ ತೆರಿಗೆ ಮಸೂದೆಯನ್ನು(ಬಿಲ್) ಅಥವಾ ಜಿ.ಎಸ್.ಟಿ ಮಸೂದೆ (ಬಿಲ್)ಯನ್ನು ರಾಜ್ಯ ಸಭೆಯಲ್ಲಿ ಒಪ್ಪಿಗೆಗಾಗಿ ಮಂಡಿಸಿದ್ದಾರೆ.

- 2016 ಆಗಸ್ಟ್ 3 ಬುಧವಾರ ರಾಜ್ಯಸಭೆಯಲ್ಲಿ ಸಂವಿಧಾನ ತಿದ್ದುಪಡಿ ಬಿಲ್ ಅಂಗೀಕಾರದ ನಿರೀಕ್ಷೆಯಲ್ಲಿದೆ. ಈಗಾಗಲೇ ಅದು ಲೋಕಸಭೆಯಲ್ಲಿ ಅಂಗೀಕಾರವಾಗಿದೆ. ಈಗ ರಾಷ್ಟ್ರವ್ಯಾಪಿ ಸರಕು ಮತ್ತು ಸೇವೆಗಳ ತೆರಿಗೆ (ಜಿ.ಎಸ್.ಟಿ.) ತೆರಿಗೆ ದರಗಳ ಬಗೆಗೆ ಗಮನಕೊಡಲಾಗುತ್ತಿದೆ. ಹೊಸ ಪದ್ಧತಿಯಡಿಯಲ್ಲಿ, ರಾಜ್ಯಗಳು ಮತ್ತು ಕೇಂದ್ರವು ಸರಕು ಮತ್ತು ಸೇವೆಗಳ ಮೇಲೆ ಒಂದೇ ತೆರಿಗೆ ದರಗಳನ್ನು ಸಂಗ್ರಹಿಸುತ್ತವೆ. ಉದಾಹರಣೆಗೆ, ದೇಶಾದ್ಯಂತ 18% ಜಿ.ಎಸ್.ಟಿ. ಉತ್ತಮ ದರ; ಇದರಂತೆ ರಾಜ್ಯಗಳು ಮತ್ತು ಕೇಂದ್ರ ತಲಾ 9% ಕೇಂದ್ರ ಜಿ.ಎಸ್.ಟಿ. ಮತ್ತು ರಾಜ್ಯ ಜಿ.ಎಸ್.ಟಿ. ಪಡೆಯುತ್ತವೆ, (Central CGST and State SGST) [೯]

downloaded from: www.kpscvaani.com
Scanned by CamScanner

# ^ ಜಿ.ಎಸ್.ಟಿ.ತೆರಿಗೆ ವಿವರ

**ಜಿ.ಎಸ್ ಟಿ. ತೆರಿಗೆ-Goods and Services Tax;**

- ಉತ್ಪಾದನೆ,ಮಾರಾಟ,ಬಳಕೆ ವಸ್ತುಗಳು ಮತ್ತು ಸೇವೆಗಳ ಮೇಲೆ ರಾಷ್ಟ್ರೀಯ ಮಟ್ಟದಲ್ಲಿ ಹೇರಲಾಗುವ ಸಮಗ್ರ ತೆರಿಗೆಗೆ ಸರಕು ಮತ್ತು ಸೇವಾ ತೆರಿಗೆ ಎಂದು ಕರೆಯಲಾಗುತ್ತದೆ. ಇದು ಭಾರತದ ಅತಿ ದೊಡ್ಡ ಸೇವಾ ತೆರಿಗೆಗಳಲ್ಲೊಂದು ಎಂದು ಹೇಳಲಾಗುತ್ತದೆ. ಸರಳವಾಗಿ ಹೇಳಬೇಕೆಂದರೆ, ಗ್ರಾಹಕರು ವಸ್ತುಗಳನ್ನು ಖರೀದಿಸುವಾಗ ಅಥವಾ ಸೇವೆಗಳನ್ನು ಪಡೆದುಕೊಳ್ಳುವಾಗ ಪ್ರತಿ ಹಂತದಲ್ಲಿಯೂ ವಿಧಿಸುವ ತೆರಿಗೆಯಾಗಿರುತ್ತದೆ. ಈ ತೆರಿಗೆ ವಿಧಾನ ಈಗಾಗಲೇ ವಿಶ್ವದ 150 ದೇಶಗಳಲ್ಲಿ ಜಾರಿಯಲ್ಲಿದೆ. ಇದು ಇಡೀ ದೇಶವನ್ನು ಸಮಾನ ಮಾರುಕಟ್ಟೆಯಡಿ ತರಲಿದ್ದು, ಎಲ್ಲಾ ಪರೋಕ್ಷ ತೆರಿಗೆಗಳನ್ನು ಬದಲಾಯಿಸಿ ಒಂದೇ ತೆರಿಗೆ ವ್ಯವಸ್ಥೆಯಡಿ ತರಲಿದೆ.

**downloaded from: www.kpscvaani.com**
Scanned by CamScanner

## ಆರ್ಥಿಕ ಮುನ್ನಡೆಯ ಉದ್ದೇಶ

- ಮೂಲತಃ ಜಿಎಸ್‌ಟಿ, ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಶಿಶು;
- ಜಿಎಸ್‌ಟಿ ಫಲವಾಗಿ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ಶೇ 1ರಿಂದ 2 ರಷ್ಟು ಹೆಚ್ಚಳ ಸಾಧ್ಯತೆ;
- ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು (ಜಿಡಿಪಿ) ಹೆಚ್ಚಿಸಿ ಅರ್ಥ ವ್ಯವಸ್ಥೆಯನ್ನು ಪ್ರಗತಿಯ ಪಥದತ್ತ ಒಯ್ಯುವ ಪಥ;
- ಉದ್ಯಮ, ಕೈಗಾರಿಕೆ ಮತ್ತು ಉತ್ಪಾದನಾ ವಲಯಗಳ ಚೇತರಿಕೆ;
- ವಿದೇಶಿ ಬಂಡವಾಳ ಹೂಡಿಕೆದಾರರಲ್ಲಿ ವಿಶ್ವಾಸ, ಭರವಸೆ. ವಿದೇಶಿ ಬಂಡವಾಳ ವೃದ್ಧಿ;
- ಹೆಚ್ಚೆಚ್ಚು ಉದ್ಯೋಗ ಸೃಷ್ಟಿಗೆ ಅನುಕೂಲ;
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಹೊಸ ಸಹಕಾರದ ಭಾಷ್ಯೆ;
- ತೆರಿಗೆ ತಪ್ಪಿಸುವ ಚಾಳಿ ದೂರವಾಗಿ ತೆರಿಗೆ ಪಾವತಿಯೂ ಹೆಚ್ಚಲಿದೆ;
- ವಿತ್ತೀಯ ಶಿಸ್ತನ್ನು ಪಾಲಿಸಲು ಸರ್ಕಾರಕ್ಕೆ ನೆರವು, ಹಣದುಬ್ಬರ ನಿಯಂತ್ರಣ;

.

downloaded from: www.kpscvaani.com
Scanned by CamScanner

## ಜಿ.ಎಸ್.ಟಿ ಅಗತ್ಯ

- ಪ್ರಸ್ತುತ ನಮ್ಮ ದೇಶದಲ್ಲಿ ವಿವಿಧ ರೀತಿಯ ತೆರಿಗೆ ವಿಧಾನಗಳಿವೆ. ಕೇಂದ್ರ ಮತ್ತು ಅಬಕಾರಿ ಸುಂಕ , ಸೇವಾ ತೆರಿಗೆ ಮತ್ತು ಕಸ್ಟಮ್ಸ್ ತೆರಿಗೆಗಳನ್ನು ಕೇಂದ್ರ ಸರ್ಕಾರ ಹಾಕುವುದಿದ್ದರೆ, ಮೌಲ್ಯವರ್ಧಿತ ತೆರಿಗೆವ್ಯಾಟ್ ), ಮನರಂಜನಾ ತೆರಿಗೆ, ಐಷಾರಾಮಿ ತೆರಿಗೆ ಅಥವಾ ಲಾಟರಿ ತೆರಿಗೆಗಳನ್ನು ಆಯಾ ರಾಜ್ಯ ಸರಕಾರಗಳು ವಿಭಿನ್ನವಾಗಿ ನಿಭಾಯಿಸುತ್ತವೆ. ಈ ಎಲ್ಲಾ ತೆರಿಗೆಗಳನ್ನು ಒಂದೇ ತೆರಿಗೆ ವಿಧಾನದಡಿ ತರಲು ಜಿಎಸ್ ಟಿಯನ್ನು ಜಾರಿಗೆ ತರಲಾಗುತ್ತದೆ.

- ಇದರಿಂದ ದೇಶಾದ್ಯಂತ ಯಾವುದೇ ಅಡೆತಡೆಯಿಲ್ಲದೆ ವಹಿವಾಟು ನಡೆಸಬಹುದು. ವಹಿವಾಟು ವೆಚ್ಚ ಕೂಡ ಕಡಿಮೆಯಾಗುತ್ತದೆ. ಭಾರತದ ಆರ್ಥಿಕ ಮಟ್ಟ ಸುಧಾರಣೆಯಾಗುತ್ತಿರುವ ಇಂದಿನ ದಿನಗಳಲ್ಲಿ ಈ ತೆರಿಗೆ ಪದ್ಧತಿ ಪ್ರಸ್ತುತವಾಗಿದೆ.ಇದು ಭ್ರಷ್ಟತೆಯನ್ನು ಕಡಿಮೆ ಮಾಡಿ ಹೆಚ್ಚು ಪಾರದರ್ಶಕವಾಗಿ ಆಡಳಿತ ನಡೆಸಲು ಅನುಕೂಲವಾಗುತ್ತದೆ.

downloaded from: www.kpscvaani.com
Scanned by CamScanner

# ಅನುಕೂಲ

- ಪ್ರಸ್ತುತ ಭಾರತದಲ್ಲಿರುವ ತೆರಿಗೆ ಪದ್ಧತಿ ತುಂಬಾ ಸಂಕೀರ್ಣವಾಗಿದೆ. ಯಾವುದೇ ವ್ಯಾಪಾರ-ವಹಿವಾಟು ನಡೆಸಲು ಕಾನೂನು ಕಟ್ಟಳೆಗಳನ್ನು ಈಡೇರಿಸಬೇಕಾಗುತ್ತದೆ. ಜಿಎಸ್ ಟಿ ತೆರಿಗೆ ವಿಧಾನಗಳನ್ನು ಸರಳಗೊಳಿಸಿ ನಿರ್ವಹಣಾ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದರಿಂದ ಅಂತಿಮವಾಗಿ ಗ್ರಾಹಕರಿಗೆ ಅನುಕೂಲವಾಗುತ್ತದೆ. ಅಲ್ಲದೆ ಭಾರತದ ಜಿಡಿಪಿ ( ಸಮಗ್ರ ದೇಶೀಯ ಉತ್ಪನ್ನ ) ಮತ್ತು ಆದಾಯ ಹೆಚ್ಚಾಗಲಿದ್ದು, ಗ್ರಾಹಕರಿಗೆ ಈ ತೆರಿಗೆಯಿಂದ ಪರೋಕ್ಷ ಲಾಭ ಹೆಚ್ಚಿದೆ. ಭಾರತದ ಆದಾಯ ಹೆಚ್ಚಲು ಹೆಚ್ಚು ಅನುಕೂಲವಾಗಿದೆ. ಜಿಎಸ್ಟಿಯಿಂದ ಭಾರತದ ಒಟ್ಟಾರೆ ಜಿಡಿಪಿ ಮತ್ತು ಒಟ್ಟು ಆದಾಯ ಸಂಗ್ರಹಣೆ ಹೆಚ್ಚಾಗುತ್ತದೆ.ವಿದೇಶಗಳಿಗೆ ಹೆಚ್ಚು ರಫ್ತು ಆಗಲಿದ್ದು, ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುತ್ತದೆ. ಉದ್ಯೋಗ ಉತ್ತೇಜಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

downloaded from: www.kpscvaani.com
Scanned by CamScanner

# ವಹಿವಾಟು ಮೇಲೆ ಜಿಎಸ್ಟಿ ಪರಿಣಾಮ

- ಸರಕು ಮತ್ತು ಸೇವಾ ತೆರಿಗೆಯನ್ನು ಅತ್ಯಂತ ಸರಳವಾಗಿ ಹೇಳುವುದಾದರೆ,ಒಂದು ಉತ್ಪಾದನ ಘಟಕವನ್ನು ತೆರೆದಿದರೆ. ಇದಕ್ಕೆ ಕೇಂದ್ರ ಸರ್ಕಾರಕ್ಕೆ ತೆರಿಗೆ ಕಟ್ಟಬೇಕು ಜೊತೆಗೆ ಪ್ರತ್ಯೇಕ ರಿಟರ್ನ್ ಫೈಲ್ ಮಾಡಬೇಕು. ಆದರೆ ಬೇರೆ ಚಿಲ್ಲರೆ ಗ್ರಾಹಕರಿಗೆ ನಿಮ್ಮ ಉತ್ಪನ್ನಗಳನ್ನು ಪೂರೈಸುವಾಗ ತೆರಿಗೆ ಕಟ್ಟಬೇಕಾಗಿಲ್ಲ ಹಾಗೂ ರಿಟರ್ನ್ ಫೈಲ್ ಮಾಡಬೇಕಾಗಿಲ್ಲ. ಜಿಎಸ್ಟಿ ಇಡೀ ದೇಶಕ್ಕೆ ಏಕರೂಪ ತೆರಿಗೆ ವಿಧಾನವಾಗಿರುವುದರಿಂದ ಬೇರೆ ರಾಜ್ಯಗಳಲ್ಲಿ ಕಂಪೆನಿ ಆರಂಭಿಸಬೇಕೆಂದಿದ್ದರೆ ಅಲ್ಲಿ ತೆರಿಗೆ ಕಟ್ಟಬೇಕಾಗಿಲ್ಲ. ಹಾಗಾಗಿ ಇದು ಸರಳವೆನಿಸುತ್ತದೆ. ಆದುದರಿಂದ ಈ ಹೊಸ ತೆರಿಗೆ ನಮ್ಮ ಜೀವನವನ್ನು ಸಂಕೀರ್ಣದಿಂದ ಸರಳತೆಗೆ ತರಬಹುದು. [೧೦]

downloaded from: www.kpscvaani.com
Scanned by CamScanner

# ^ ಜಿಎಸ್‌ಟಿ ತೆರಿಗೆಯ ಪರಿಣಾಮ

**ಹೊಸ ತೆರಿಗೆಯ ವಿಶೇಷ**

- ಒಟ್ಟು 150 ದೇಶಗಳಲ್ಲಿ ಜಿಎಸ್‌ಟಿ ಅಸ್ತಿತ್ವದಲ್ಲಿದೆ;

- ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆಯ ಎಲ್ಲ ದೇಶಗಳಲ್ಲಿಯೂ ಜಿಎಸ್‌ಟಿ ಇದೆ,(ಅಮೆರಿಕ ಹೊರತುಪಡಿಸಿ);

- ಈಗ ರಾಜ್ಯಗಳು ಮಾರಾಟ ತೆರಿಗೆ ಮಾತ್ರ ವಿಧಿಸುತ್ತಿವೆ. ಸೇವಾ ತೆರಿಗೆ ರಾಜ್ಯಕ್ಕೆ ಇಲ್ಲ;

- ತಯಾರಿಕೆ ಮೇಲೆ ಕೇಂದ್ರ ತೆರಿಗೆ ವಿಧಿಸುತ್ತದೆ. ಆದರೆ ಸಗಟು ಮತ್ತು ಚಿಲ್ಲರೆ ಮಾರಾಟದ ಮೇಲೆ ಕೇಂದ್ರ್ರದ ತೆರಿಗೆ ಇಲ್ಲ;

- ತೆರಿಗೆ ವಿಷಯದಲ್ಲಿ ಎಲ್ಲ ರಾಜ್ಯಗಳು ಈಗ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ, ಇನ್ನು ಮುಂದೆ ಇಲ್ಲ;

- ಜಿಎಸ್‌ಟಿಯಿಂದಾಗಿ ಕಾರ್ಯನಿರ್ವಹಣಾ ವೆಚ್ಚ ಕಡಿತವಾಗಲಿದೆ;

.

downloaded from: www.kpscvaani.com

Scanned by CamScanner

# ಹೊಸ ತೆರಿಗೆಯ ಪ್ರಯೋಜನ

- ೧.ಸರಳೀಕೃತ ತೆರಿಗೆ ಪದ್ಧತಿ ಜಾರಿ.
- ೨.ಜಿಡಿಪಿ ಪ್ರಗತಿ ದರ ಶೇ.2ರಷ್ಟು ಹೆಚ್ಚಾಗುವ ನಿರೀಕ್ಷೆ.
- ೩.ಗ್ರಾಹಕರಿಗೆ ಸರಕು, ಸೇವೆಗಳು ಅಗ್ಗದ ದರದಲ್ಲಿ ಲಭ್ಯ.
- ೪.ಹೂಡಿಕೆದಾರರಿಗೆ ಉದ್ಯಮಿ ಸ್ನೇಹಿ ವಾತಾವರಣ.
- ೫.ತೆರಿಗೆ ಹೊರೆಯು ಉತ್ಪಾದನೆ ಮತ್ತು ಸೇವೆಯ ಮೇಲೆ ಸಮನಾಗಿ ಹಂಚಿಕೆ.
- ೬.ತೆರಿಗೆ ಜಾಲ ಇನ್ನಷ್ಟು ವಿಸ್ತರಣೆ,
- *ಹೆಚ್ಚಿನ ತೆರಿಗೆ ಸಂಗ್ರಹ ಪಾರದರ್ಶಕ,
- *ಭ್ರಷ್ಟಾಚಾರ ಮುಕ್ತ ತೆರಿಗೆ ವ್ಯವಸ್ಥೆ.
- ೭.ತೆರಿಗೆ ವ್ಯಾಪ್ತಿ ಹೆಚ್ಚಳ.
- ೮.ಹಾಗಾಗಿ, ಕೇಂದ್ರ, ರಾಜ್ಯ ಸರ್ಕಾರಗಳಿಗೆ ವಾರ್ಷಿಕ
- *1 ಲಕ್ಷ ಕೋಟಿ ರೂ. ಹೆಚ್ಚುವರಿ ಆದಾಯ ನಿರೀಕ್ಷೆ.

.

downloaded from: www.kpscvaani.com
Scanned by CamScanner

## ಅನುಕೂಲಗಳು

- ಗ್ರಾಹಕರಿಗೂ ಲಾಭವಿದೆ:ಉದಾಹರಣೆಗೆ ಸದ್ಯ 300 ರೂ.ಬೆಲೆ ಬಾಳುವ 1 ಚೀಲ ಸಿಮೆಂಟ್ ಮೇಲೆ ಕೇಂದ್ರ ಮತ್ತು ರಾಜ್ಯಗಳು ವಿಧಿಸುವ ತೆರಿಗೆ ಪ್ರಮಾಣ 66 ರೂ. ಇದೆ. ಜಿಎಸ್‌ಟಿ ಜಾರಿ ಬಳಿಕ ಇದು 44 ರೂ.ಗೆ ಇಳಿಯಲಿದೆ.

- ಸರ್ಕಾರಕ್ಕೂ ಲಾಭ:ಬಹುತೇಕ ಎಲ್ಲಾ ವಸ್ತುಗಳು ತೆರಿಗೆ ವ್ಯಾಪ್ತಿಗೆ ಒಳಪಡುತ್ತವೆ. ಇದರಿಂದ ತೆರಿಗೆ ಜಾಲ ವಿಸ್ತರಣೆಗೊಂಡು, ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ.

- ಇದುವರೆಗೆ ಎಲ್ಲಿ ಕಡಿಮೆ ತೆರಿಗೆ ವಿಧಿಸಲಾಗುತ್ತದೆಯೋ ಅಲ್ಲಿ ಕಂಪನಿಗಳು ತಮ್ಮ ಘಟಕ ಸ್ಥಾಪಿಸುತ್ತಿದ್ದವು. ಆದರೆ ಇನ್ನು ಆ ನೀತಿ ತಪ್ಪುತ್ತದೆ. ಎಲ್ಲಿ ಉದ್ಯಮಕ್ಕೆ ಪೂರಕ ವಾತಾವರಣ ಇದೆಯೋ ಎಲ್ಲಿ ಘಟಕ ಸ್ಥಾಪಿಸುತ್ತವೆ.

downloaded from: www.kpscvaani.com
Scanned by CamScanner

# ^ ಈಗ ಭಾರತದಲ್ಲಿರುವ ತೆರಿಗೆಗಳು

**ಕೇಂದ್ರ ತೆರಿಗೆ**

೧.ಕೇಂದ್ರೀಯ ಅಬಕಾರಿಸುಂಕ

೨.ಹೆಚ್ಚುವರಿ ಅಬಕಾರಿ ಸುಂಕ

೩.ಸೇವಾ ತೆರಿಗೆ

೪.ಹೆಚ್ಚುವರಿ ಸೀಮಾ ಸುಂಕ

(೪) (ಕೌಂಟರ್ ವೆಲಿಂಗ್ ಡ್ಯೂಟಿ)

೫.ವಿಶೇಷ ಹೆಚ್ಚುವರಿ ಸೀಮಾ ಸುಂಕ

೬.ಸರ್‌ಚಾರ್ಜ್

೭.ಸೆಸ್‌ಗಳು

**ರಾಜ್ಯ ತೆರಿಗೆ**

೧.ವ್ಯಾಟ್/ ಸೇವಾ ತೆರಿಗೆ

೨.ಮನರಂಜನಾ ತೆರಿಗೆ (ಸ್ಥಳೀಯ ಸಂಸ್ಥೆ ತೆರಿಗೆ ಬಿಟ್ಟು)

೩.ಖರೀದಿ ತೆರಿಗೆ

೪.ಐಷಾರಾಮಿ ತೆರಿಗೆ

೫.ಲಾಟರಿ, ಬೆಟ್ಟಿಂಗ್,

೬.ಜೂಜು ತೆರಿಗೆ

೭.ಪ್ರವೇಶ ತೆರಿಗೆ

೮.ರಾಜ್ಯ ಸೆಸ್,

೯.ಸರ್‌ಚಾರ್ಜ್‌ಗಳು

೧೦.ಆಕ್ಟ್ರಾಯ್

downloaded from: www.kpscvaani.com
Scanned by CamScanner

# ^ ಜುಲೈ ೧, ೨೦೧೭ ರಿಂದ ಜಿ.ಎಸ್.ಟಿ.

- ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯನ್ನು ಎಲ್ಲ ರಾಜ್ಯಗಳಲ್ಲಿ ಜಾರಿಗೆ ತರುವ ಪೂರ್ವಭಾವಿ ಸಿದ್ಧತೆಗಳೆಲ್ಲ ಭರದಿಂದ ಸಾಗಿವೆ. ಹೊಸ ವ್ಯವಸ್ಥೆ ಜಾರಿಗೆ ತರಲು 2017 ಜುಲೈ 1ರ ಗಡುವು ನಿಗದಿ ಮಾಡಲಾಗಿದೆ.ಸ್ವಾತಂತ್ರ್ಯಾನಂತರದ ಅತಿ ದೊಡ್ಡ ತೆರಿಗೆ ಸುಧಾರಣಾ ಕ್ರಮ ಇದಾಗಿದೆ. ಇಡೀ ದೇಶವನ್ನು ವಿಶ್ವದಲ್ಲಿಯೇ ಅತಿದೊಡ್ಡ ಏಕೀಕೃತ ಮಾರುಕಟ್ಟೆಯನ್ನಾಗಿ ಪರಿವರ್ತಿಸಲಿದೆ. ಹೊಸ ತೆರಿಗೆ ವ್ಯವಸ್ಥೆಯು ಸದ್ಯದ ತೆರಿಗೆ ಸ್ವರೂಪವನ್ನೇ ಆಮೂಲಾಗ್ರವಾಗಿ ರೂಪಾಂತರಿಸಲಿದೆ.

downloaded from: www.kpscvaani.com
Scanned by CamScanner

# ದೇಶ ಒಂದೇ ಮಾರುಕಟ್ಟೆ

- ಸದ್ಯಕ್ಕೆ ಜಾರಿಯಲ್ಲಿ ಇರುವ ಬಹುಹಂತದ ತೆರಿಗೆ ವ್ಯವಸ್ಥೆ ಕೊನೆಗೊಳ್ಳಲಿದೆ. ದೇಶದಾದ್ಯಂತ ಒಂದೇ ಬಗೆಯ ತೆರಿಗೆ ವ್ಯವಸ್ಥೆ ಜಾರಿಗೆ ಬರಲಿದೆ. ಇಡೀ ದೇಶ ಒಂದೇ ಮಾರುಕಟ್ಟೆಯಾಗಿ ಪರಿವರ್ತನೆಯಾಗಲಿದೆ. ಯಾವುದೇ ಸರಕು ಮತ್ತು ಸೇವೆಯ ಬೆಲೆ ದೇಶದಾದ್ಯಂತ ಒಂದೇ ರೀತಿಯಲ್ಲಿ ಇರಲಿದೆ.
- ಹತ್ತಾರು ತೆರಿಗೆಗಳು ರದ್ದಾಗಿ ಒಂದೇ ಬಗೆಯ ತೆರಿಗೆ ವ್ಯವಸ್ಥೆ
- ಸಂಕೀರ್ಣ ಸ್ವರೂಪದ ತೆರಿಗೆ ವ್ಯವಸ್ಥೆ ರದ್ದು
- ವ್ಯಾಪಾರಿಗಳು ಮತ್ತು ಉದ್ಯಮಿಗಳ ತೆರಿಗೆ ವಂಚನೆಗೆ ಕೊನೆ
- ತೆರಿಗೆದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಳ
- ಅಭಿವೃದ್ಧಿಗೆ ತೊಡಕಾಗಿದ್ದ ಸಂಕೀರ್ಣ ಸ್ವರೂಪದ ತೆರಿಗೆ ವ್ಯವಸ್ಥೆ ಸರಳ
- ಸರಕುಗಳ ಸಾಗಣೆ ವೆಚ್ಚ ಇಳಿಕೆ.

downloaded from: www.kpscvaani.com
Scanned by CamScanner